**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.346/2023**

**CW -4 PW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರಾಮಣ್ಣ |
| ತಂದೆ | ಃ | ಸೈದಪ್ಪ |
| ವಯಸ್ಸು | ಃ | 60 |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ರಾಮದುರ್ಗ |
| ಪ್ರಮಾಣಿಕರಿಸಿದ ದಿನಾಂಕ | ಃ | **04-06-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ಚಾಸಾ-1 ನನ್ನ ತಮ್ಮನ ಮಗ, ಚಾಸಾ-3, 5 ಮತ್ತು 6 ಹಾಗೂ ಆರೋಪಿತರು ಗೊತ್ತು. ಈಗ 2 ವರೆ ವರ್ಷಗಳ ಹಿಂದೆ ಬೆಳಿಗ್ಗೆ 11-12 ಗಂಟೆಗೆ ನಾನು ಚಾಸಾ-1 ಮತ್ತು 3 ರವರು ನಮ್ಮ ಜಮೀನು ಸ.ನಂ.5 ರಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಜಮೀನಿಗೆ ಬಂದು ನಮ್ಮ ಹೊಲದಲ್ಲಿ ನೀವು ಏನು ಮಾಡುತ್ತೀರಿ ಎಂದು ನಮ್ಮ ಜೊತೆ ಜಗಳ ತೆಗೆದು 1 ನೇ ಆರೋಪಿ ಸಲಿಕೆಯಿಂದ ನನ್ನ ಎದೆಗೆ ಹೊಡೆದು ಗಾಯ ಮಾಡಿರುತ್ತಾರೆ. 7 ನೇ ಆರೋಪಿ ಬಡಿಗೆಯಿಂದ ನನ್ನ ಎಡ ಭಜಕ್ಕೆ ಕೈಯಿಗೆ ಹೊಡೆದು ರಕ್ತ ಗಾಯ ಮಾಡಿ ಇನ್ನೊಂದು ಸಲ ಜಮೀನಿಗೆ ಬಂದರೆ ಸಾಯಿಸುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ಅ ಕುರಿತು ಪೋಲಿಸರಿಗೆ ನಾನು ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ನೊಡಿದರೆ ಗುರುತ್ತಿಸುತ್ತೇನೆ. ನ್ಯಾಯಾಲದ ಮುಂದೆ ಇರುವ ಮುಮಾಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿ ಪರ ವಕಿಲರು 2 ರಿಂದ 5 ಮತ್ತು 7 ನೇ ಆರೋಪಿತರು ಗೈರು ಹಾಜರು ಇದ್ದು ಅವರನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲವೆಂದು ಹೇಳಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ SSP ವಕೀಲರಿಂದ**

ನಾನು ಚಾಸಾ-1, 3, 5 ಮತ್ತು6 ಸಂಬಂಧಿಕರು ಎಂದರೆ ಸರಿ. ಸ.ನಂ.5 ರಲ್ಲಿ ಒಟ್ಟು 17 ಎಕರೆ ಚಿಲ್ಲರೆ ಗುಂಟೆ ಇರುತ್ತದೆ. ಸ.ನಂ.5 ರಲ್ಲಿ 1 ನೇ ಆರೋೇಪಿ ಖರೀದಿ ಮಾಡಿದ ಜಮೀನು ಇರುವುದಿಲ್ಲ. ಸ.ನಂ.5 ರಲ್ಲಿ ಚಾಸಾ-1 ರವರ ತಮ್ಮನ ಹೆಂಡತಿಯಾದ ರಸೂಲ ಬೀ ಹೆಸರಿನಲ್ಲಿ ಪಣಹಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ಹೊಂದಿಕೊಂಡು ನಮ್ಮ ಜಮೀನು ಇರುತ್ತದೆ ಎಂದರೆ ಸರಿ. ಘಟನೆಗೆ ಸೇರಿದಂತೆ ಜಮೀನು ಪಹಣಿಯನ್ನು ಪೋಲಿಸರಿಗೆ

ನಾನು ನೀಡಿರುತ್ತೇನೆ. ಆರೋಪಿತರ ಮತ್ತು ನಮ್ಮ ನಡುವೆ ಸ.ನಂ.5 ಜಮೀನು ಕುರಿತು ತಂಟೆ ಇದೆ ಎಂದರೆ ಸರಿ. ಸದರಿ ವೈಶಮ್ಯದಿಂದ ನಮ್ಮ ಮತ್ತು ಆೋರೋಪಿತರ ನಡುವೆ ಮಾತು ಕತೆ ಇರುವುದಿಲ್ಲ ಎಂದರೆ ಸರಿ. ಆರೋಪಿತರು ತಮ್ಮ ಜಮೀನಿನಲ್ಲಿ ಕೆಲಸ ಮಾಡುವಾಗ, ನಾನು ನನ್ನ ತಮ್ಮ ಮತ್ತು ನನ್ನ ತಮ್ಮನ ಮಗ ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಘಟನೆಗೆ ಸೇರಿದಂತೆ ಆರೋಪಿತರು ನಮ್ಮ ಮೇಲೆ ದೂರು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ನಮ್ಮ ವಿರುದ್ದ ದೂರು ನೀಡಿದ್ದರಿಂದ ಅದಕ್ಕೆ ಪ್ರತಿಯಾಗಿ ನಾನು ನನ್ನ ತಮ್ಮನ ಮಗನ ಮೂಲಕ ಸುಳ್ಳು ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನಾನು ಚಾಸಾ-3, 6 ಇದ್ದೆವು. ಪೋಲಿಸರು ಘಟನೆಯಾದ 4-5 ದಿನಗಳ ನಂತರ ನನ್ನ ಹೇಳಿಕೆ ಪಡೆದಿರುತ್ತಾರೆ. ಪೋಲಿಸರು ನನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಚಾಸಾ-1 ಯಾರ ವಿರುದ್ದ ದೂರು ನೀಡಿರುತ್ತಾನೆ ನನಗೆ ಗೊತ್ತಿರುತ್ತದೆ. ಚಾಸಾ-1 ಬಸಲಿಂಗಮ್ಮ ಮತ್ತು ಬಸವರಾಜ ವಿರುದ್ದ ದೂರು ನೀಡಿರುವುದಿಲ್ಲ. 3-4 ಜನರ ಆರೋಪಿತರ ಕೈಯಲ್ಲಿ ಬಡಿಗೆಗಳು ಇದ್ದವು. 1 ನೇ ಮತ್ತು 7 ನೇ ಆರೋಪಿತರು ನನಗೆ ಕಟ್ಟಿಗೆ ಮತ್ತು ಸಲಿಕೆಯಿಂದ ಹೊಡೆದಿರುತ್ತಾರೆ. ಸದರಿ ದಿನ 6 ನೇ ಆರೋಪಿ ಮೆಹಬೂಬು ತಂದೆ ಬಾಬಸಾಬ ಇರಲಿಲ್ಲ ಸಾಕ್ಷಿ ಮುಂದುವರೆದು ಬೇರೆ ಗ್ರಾಮದವರನ್ನು ಕರೆಸಿ ನಮಗೆ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ದೂರು ಕೊಡಲು ಚಾಸಾ-1 ರವರ ಜೊತೆ ನಾನು ಹೋಗಿದ್ದೆ. ಘಟನೆಯಲ್ಲಿ ಒಂದು ಬಡಿಗೆಯನ್ನು ಜಪ್ತಿ ಮಾಡಿಕೊಂಡಿದ್ದು ಉಳಿದ ಬಡಿಗೆಗಳು ಏನಾಗಿರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿ ಘಟನೆಯಲ್ಲಿ ನನಗೆ ಪ್ರಜ್ಞೆ ತಪ್ಪಿದ್ದರಿಂದ ಅವುಗಳ ಬಗ್ಗೆ ನನಗೆ ಗೊತ್ತಿಲ್ಲ. ಘಟನೆಯಲ್ಲಿ ಅಂದಾಜು 30 ನಿಮಿಷ ನನ್ನ ಪ್ರಜ್ಞೆ ತಪ್ಪಿರುತ್ತದೆ. ಪ್ರಜ್ಞೆ ತಪ್ಪಿದ ನಂತರ ನನ್ನನ್ನು ದೇವದುರ್ಗ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಘಟನೆ ನಡೆದ ದಿನವೇ ನನ್ನನ್ನು ನ್ಯಾಯಾಧೀಶರ ಗೃಹ ಕಛೇರಿಗೆ ಪೋಲಿಸರು ಕರೆದುಕೊಂಡು ಹೋಗಿರುತ್ತಾರೆ.

ಆರೋಪಿತರ ಜಮೀನನ್ನು ಕಬಳಿಸುವ ಉದ್ದೇಶದಿಂದ ಅವರ ಜೊತೆ ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಎಲ್ಲ ರೈತರ ಮನೆಗಳಲ್ಲಿ ಇರುತ್ತವೆ ಎಂದರೆ ಸರಿ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಿಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.346/2023**

**CW -2 PW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರೆಡೆಪ್ಪ |
| ತಂದೆ | ಃ | ರಾಮಣ್ಣ |
| ವಯಸ್ಸು | ಃ | 38 |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ರಾಮದುರ್ಗ |
| ಪ್ರಮಾಣಿಕರಿಸಿದ ದಿನಾಂಕ | ಃ | **04-06-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಈಗ್ಗೆ 2 ವರ್ಷಗಳ ಹಿಂದೆ ಬೆಳಿಗ್ಗೆ 11 ರಿಂದ 12 ಗಂಟೆ ವರೆಗೆ ಪೋಲಿಸರು ಜಮೀನಿನಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆ ಮಾಡಿ ಒಂದು ಬಡಿಗೆ ಮತ್ತು ಸಲಿಕೆಯನ್ನು ಜಪ್ತಿ ಮಾಡಿಕೊಂಡು ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ. ಚಸಾ-1 ರವರು ಗುನ್ನ ಸ್ಥಳ ತೋರಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಸಲಿಕೆ ಮತ್ತು ಬಡಿಗೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು. ಅ ಸಮಯದಲ್ಲಿ ಭಾವಚಿತ್ರ ತೆಗೆದಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಪಂಚನಾಮೆ ಮೇಲೆ ಇದ್ದ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಆರೋಪಿ ಪರ ಶ್ರೀ SSP ವಕೀಲರಿಂದ**

ಚಾಸಾ-4 ನನ್ನ ಮಾವನಾಗಬೇಕು. ಚಾಸಾ-1 ನನಗೆ ಅಳಿಯನಾಗಬೇಕು. ಚಾಸಾ-3 ನನಗೆ ಮಾವನಾಗಬೇಕು. ಚಸಾ-5 ಮತ್ತು 6 ನನ್ನ ಸಂಬಂಧಿಕರು ಎಂದರೆ ಸರಿ. ಜಗಳ ಸಮಯದಲ್ಲಿ ನಾನು ಇರಲಿಲ್ಲ. ಊರಿನಿಂದ ಗುನ್ನ ಸ್ಥಳದಿಂದ ಅಂದಾಜು 2 ಕಿ.ಮೀ ಅಂತರ ಇರುತ್ತದೆ. ಘಟನ ಸ್ಥಳಕ್ಕೆ ನನ್ನನ್ನು ಚಾಸಾ-1 ಕರೆದುಕೊಂಡು ಹೋಗಿರುತ್ತಾರೆ. ಪಂಚನಾಮೆ ಸಮಯದಲ್ಲಿ 3 ಪೋಲಿಸರು, ನಾನು ಮತ್ತು ಚಾಸಾ-6 ಇದ್ದೆವು. ಸದರಿ ದಿನ ಚಾಸಾ-3 ರಾಮದುರ್ಗ ಗ್ರಾಮದಲ್ಲಿ ಇದ್ದ. ಚಾಸಾ-3 ಘಟನ ಸ್ಥಳಕ್ಕೆ 11 ಗಂಟೆಗೆ ಬಂದಿರುತ್ತಾನೆ. ಪಂಚನಾಮೆಯನ್ನು ಆರೋಪಿ ಜಮೀನಿನಲ್ಲಿ ಮಾಡಿರುತ್ತಾರೆ. ಘಟನ ಸ್ಥಳದ ಚಕ್ಬಂದಿ ಹೇಳಲು ಬರುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗೆ ನನ್ನ ಸಹಿಯನ್ನು ಠಾಣೆಯಲ್ಲಿ ಪಡೆದಿರುತ್ತಾರೆ. ಚಾಸಾ-1 ದ 3 ರಿಂದ 6

ಸಂಬಂಧಿಕರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರೈತರ ಮನೆಗಳಲ್ಲಿ ಮುಮಾ-1 ಮತ್ತು 2 ಇರುತ್ತವೆ ಎಂದರೆ ಸರಿ. ಮುಮಾ-1 ಮತ್ತು 2 ನ್ನು ನನ್ನ ಸಮಕ್ಷಮ ಜಪ್ತಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.